ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in.
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009

**ಸಂಖ್ಯೆ:ಕವಿಪ್ರನಿನಿ/ಬಿ85/24376/2022-23** **ದಿನಾಂಕ:** 23 DEC 2022

## <u>ಸುತ್ತೋಲೆ</u>

**ವಿಷಯ:** ನಿಗಮದ ಸಿಬ್ಬಂದಿಯ ಹಾಜರಾತಿ ನಿರ್ವಹಣಾ ವ್ಯವಸ್ಥೆಯ ಬಗ್ಗೆ.

**ಉಲ್ಲೇಖ:** ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ85/24376/2021-22 ದಿನಾಂಕ:29.11.2021.

***

ರಾಜ್ಯದಾದ್ಯಂತ ಕವಿಪ್ರನಿನಿಯ ಎಲ್ಲಾ ಕಛೇರಿಗಳಲ್ಲಿ ಹಾಗೂ ವಿದ್ಯುತ್ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಗಮದ ಸಿಬ್ಬಂದಿಯ ಹಾಜರಾತಿಯನ್ನು ಸಂಪರ್ಕ ರಹಿತ ಹಾಜರಾತಿ ನಿರ್ವಹಣಾ ವ್ಯವಸ್ಥೆಯಾದ ಲಾಗ್‌ಸೇಫ್ ಆಪ್ ಮೂಲಕ ಕಡ್ಡಾಯವಾಗಿ ದಾಖಲಿಸಲು ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ85/24376/2021-22 ದಿನಾಂಕ: 29.11.2021 ರಲ್ಲಿ ಸೂಚಿಸಲಾಗಿತ್ತು. ಆದರೂ ಸಹ, ಇದುವರೆವಿಗೂ ಹಲವು ಅಧಿಕಾರಿ/ನೌಕರರು ಪೂರ್ಣ ಪ್ರಮಾಣದಲ್ಲಿ ಹಾಜರಾತಿಯನ್ನು ದಾಖಲಿಸದೇ ಇರುವುದನ್ನು ನಿಗಮವು ಬಹಳ ಗಂಭೀರವಾಗಿ ಪರಿಗಣಿಸಿರುತ್ತದೆ.

ರಾಜ್ಯದಾದ್ಯಂತ ಕವಿಪ್ರನಿನಿಯ ಎಲ್ಲಾ ಕಛೇರಿಗಳಲ್ಲಿ ಹಾಗೂ ವಿದ್ಯುತ್ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ **<u>ನಿಗಮದ ಸಿಬ್ಬಂದಿಯು ತಪ್ಪದೇ ದಿನಾಂಕ: 01.01.2023 ರಿಂದ ಕಡ್ಡಾಯವಾಗಿ ಹಾಜರಾತಿಯನ್ನು ನಿಗದಿತ ಅವಧಿಯ ಒಳಗಾಗಿ ಲಾಗ್‌ಸೇಫ್ ಆಪ್ ನ ಮೂಲಕ ದಾಖಲಿಸಲು ಸೂಚಿಸಿದೆ.</u>**

<u>ಸಿಬ್ಬಂದಿಯ ಹಾಜರಾತಿಯ ನಿಯಂತ್ರಣ ಮತ್ತು ನಿರ್ವಹಣೆಯ ವಿಷಯದಲ್ಲಿ **ಆರಂಭಿಕವಾಗಿ,** ಬೆಂಗಳೂರಿನ ಕಾವೇರಿ ಭವನದ ನಿಗಮದ ಆಡಳಿತ ಕಛೇರಿಗಳಲ್ಲಿ ಈ ಕೆಳಕಂಡಂತೆ ಕ್ರಮಗಳನ್ನು ಜರುಗಿಸಲು ಸೂಚಿಸಲಾಗಿದೆ:</u>

1. ಹಿಂದಿನ ತಿಂಗಳ 16 ನೇ ತಾರೀಖೀನಿಂದ ವೇತನ ಪಾವತಿಸಬೇಕಿರುವ ತಿಂಗಳ 15 ನೇ ತಾರೀಖೀನ ಅವಧಿಯ **'ಎ' ಮತ್ತು 'ಬಿ' ಗುಂಪಿನ ಅಧಿಕಾರಿಗಳ ಅಟೆಂಡೆನ್ಸ್ ಲಾಗ್ ರಿಪೋರ್ಟನ್ನು ಸಂಬಂಧಿಸಿದ ಕಛೇರಿಗಳ ಮುಖ್ಯಸ್ಥರು ಹಾಗೂ 'ಸಿ' ಮತ್ತು 'ಡಿ' ಗುಂಪಿನ ನೌಕರರ ಅಟೆಂಡೆನ್ಸ್ ಲಾಗ್ ರಿಪೋರ್ಟನ್ನು ಸಂಬಂಧಿಸಿದ ಶಾಖಾ/ವಿಭಾಗ ಮುಖ್ಯಸ್ಥರು** 17 ನೇ ತಾರೀಖಿನೊಳಗಾಗಿ ದೃಢೀಕರಣಗಳೊಂದಿಗೆ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಒದಗಿಸುವುದು.

2. ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಕಛೇರಿಗಳ ಮುಖ್ಯಸ್ಥರು ಹಾಗೂ ಶಾಖಾ/ವಿಭಾಗ ಮುಖ್ಯಸ್ಥರು ಒದಗಿಸುವ ಸಿಬ್ಬಂದಿಯ ಲಾಗ್‌ಸೇಫ್ ಹಾಜರಾತಿಯ ವರದಿಯ ಆಧಾರದ ಮೇಲೆ ವೇತನ ಬಟವಾಡೆಯ ವಿಷಯದಲ್ಲಿ ಕ್ರಮಗಳನ್ನು ಜರುಗಿಸಲು ಸೂಚಿಸಿದೆ. ವೇತನ ಬಟವಾಡೆ ಅಧಿಕಾರಿಗಳು ಸಂಬಂಧಿಸಿದ ಎಲ್ಲಾ ಕಛೇರಿಗಳ ಎಲ್ಲಾ ಗುಂಪಿನ ಹುದ್ದೆಗಳ ಅಧಿಕಾರಿ/ನೌಕರರ ಅಟೆಂಡೆನ್ಸ್ ಲಾಗ್ ರಿಪೋರ್ಟನ್ನು ಮಾಹಿತಿಗಾಗಿ ಪಡೆಯಲು ಸಹ ಅವಕಾಶವನ್ನು ಕಲ್ಪಿಸಲಾಗಿದೆ.

3. ಅಧಿಕಾರಿಗಳು ಹಾಗೂ ನೌಕರರು ದಿನಾಂಕ:01.01.2023 ರಿಂದ ಹಾಜರಾತಿಯನ್ನು ಲಾಗ್‌ಸೇಫ್ ಆಪ್ ನ ಮೂಲಕ ದಾಖಲಿಸಲು ತಪ್ಪಿದಲ್ಲಿ, ಸಂಬಂಧಿಸಿದ ಮೇಲಾಧಿಕಾರಿಗಳು ಕೆಳಗೆ ಸೂಚಿಸಿರುವಂತೆ ಕ್ರಮಗಳನ್ನು ಜರುಗಿಸಲು ಸೂಚಿಸಿದೆ.

| | | |
|---|---|---|
| 1. | ಸಿಬ್ಬಂದಿಯು ಪೂರ್ವಾಹ್ನ 10.15 ಗಂಟೆಯ ನಂತರ ಮತ್ತು ಮಧ್ಯಾಹ್ನ 02.15 ರ ಒಳಗೆ ಕಛೇರಿಗೆ ಹಾಜರಾದಲ್ಲಿ **ಅಥವಾ** ಸಂಜೆ 05.30 ಗಂಟೆಯ ಒಳಗಾಗಿ ನಿರ್ಗಮಿಸಿದಲ್ಲಿ. | ಅರ್ಧ ದಿವಸದ ಸಾಂಧರ್ಭಿಕ ರಜೆ ಅಥವಾ ಸಾಂಧರ್ಭಿಕ ರಜೆಯು ಜಮೆಯಲ್ಲಿ ಇಲ್ಲ ದಿದ್ದಲ್ಲಿ, ಒಂದು ದಿನದ ಪೂರ್ಣವೇತನ ರಜೆ ಅಥವಾ ಗಳಿಕೆ ರಜೆ ಅಥವಾ ವೇತನ ರಹಿತ ರಜೆಯನ್ನು ಕಡಿತ ಮಾಡತಕ್ಕದ್ದು. |
| 2. | ಸಿಬ್ಬಂದಿಯು ಮಧ್ಯಾಹ್ನ 02.15 ಗಂಟೆಯ ನಂತರ ಕಛೇರಿಗೆ ಹಾಜರಾದಲ್ಲಿ | ಒಂದು ದಿವಸದ ಸಾಂಧರ್ಭಿಕ ರಜೆ ಅಥವಾ ಸಾಂಧರ್ಭಿಕ ರಜೆಯು ಜಮೆಯಲ್ಲಿ ಇಲ್ಲದಿದ್ದಲ್ಲಿ, ಒಂದು ದಿನದ ಪೂರ್ಣವೇತನ ರಜೆ ಅಥವಾ ಗಳಿಕೆ ರಜೆ ಅಥವಾ ವೇತನ ರಹಿತ ರಜೆಯನ್ನು ಕಡಿತ ಮಾಡತಕ್ಕದ್ದು. |
| 3. | ಸಿಬ್ಬಂದಿಯು ಪೂರ್ವಾಹ್ನ 10.15 ಗಂಟೆಯ ನಂತರ ಮತ್ತು ಮಧ್ಯಾಹ್ನ 02.15 ರ ಒಳಗೆ ಕಛೇರಿಗೆ ಹಾಜರಾದಲ್ಲಿ **ಮತ್ತು** ಸಂಜೆ 05.30 ಗಂಟೆಯ ಒಳಗಾಗಿ ನಿರ್ಗಮಿಸಿದಲ್ಲಿ. | ಒಂದು ದಿವಸದ ಸಾಂಧರ್ಭಿಕ ರಜೆ ಅಥವಾ ಸಾಂಧರ್ಭಿಕ ರಜೆಯು ಜಮೆಯಲ್ಲಿ ಇಲ್ಲದಿದ್ದಲ್ಲಿ, ಒಂದು ದಿನದ ಪೂರ್ಣವೇತನ ರಜೆ ಅಥವಾ ಗಳಿಕೆ ರಜೆ ಅಥವಾ ವೇತನ ರಹಿತ ರಜೆಯನ್ನು ಕಡಿತ ಮಾಡತಕ್ಕದ್ದು. |
| 4. | ಸಿಬ್ಬಂದಿಯು ತಿಂಗಳಲ್ಲಿ ಮೂರು ದಿವಸಗಳಿಗಿಂತ ಹೆಚ್ಚಿನ ದಿವಸಗಳಲ್ಲಿ ಕೆಲಸಕ್ಕೆ ವಿಳಂಬವಾಗಿ ಹಾಜರಾದಲ್ಲಿ ಅಥವಾ ಕಛೇರಿಯ ಕೆಲಸದ ವೇಳೆಯ ಮುಕ್ತಾಯದ ಅವಧಿಯೊಳಗಾಗಿ ನಿರ್ಗಮಿಸಿದಲ್ಲಿ | ತಿಂಗಳಲ್ಲಿ ಮೂರು ದಿವಸಗಳಿಗಿಂತ ಹೆಚ್ಚಿನ ದಿವಸಗಳಿಗೆ ವೇತನವನ್ನು ಕಡಿತ ಮಾಡುವುದರ ಜೊತೆಗೆ, ಈ ಪ್ರವೃತ್ತಿಯನ್ನು ದುರ್ನಡತೆ ಎಂದು ಪರಿಗಣಿಸಿ ಅವರ ವಿರುದ್ಧ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು. |

**ಷರಾ:**
ಕವಿಪ್ರನಿನಿಯ ಎಲ್ಲಾ ಕಛೇರಿಗಳಲ್ಲಿನ ಹಾಗೂ ವಿದ್ಯುತ್ ಕೇಂದ್ರಗಳಲ್ಲಿನ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಅಧೀನದಲ್ಲಿನ ಸಿಬ್ಬಂದಿಯ ಹಾಜರಾತಿಯನ್ನು ನಿಯಂತ್ರಣ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿದ್ದು, ಸಿಬ್ಬಂದಿಯ ರಜೆ, ತರಬೇತಿ, ತಪಾಸಣೆ, ಸಭೆಗೆ ಹಾಜರಾಗಲು, ಮತ್ತಿತರ ಅಧಿಕೃತ ಕಾರ್ಯಗಳಿಗೆ ನೀಡಿದ ಅನುಮತಿ, ಕಛೇರಿ ಅವಧಿಯನ್ನು ಮೀರಿ ಕಾರ್ಯನಿರ್ವಹಿಸಿದ ಸಿಬ್ಬಂದಿಗೆ ನೀಡಿದ ಅನುಮತಿ, ಅನ್ಯಸೇವೆ, ಪಾಳಿಯ ಅವಧಿ, ಮತ್ತಿತರ ವಿಷಯಗಳನ್ನು ವರದಿಗಳಲ್ಲಿ ದಾಖಲಿಸಬಹುದಾಗಿದೆ.

4. ಪ್ರಸ್ತುತ ಸಲ್ಲಿಸುತ್ತಿರುವ ಸಿಬ್ಬಂದಿಯ ಹಾಜರಾತಿ ಪುಸ್ತಕದ ಉದ್ಧೃತ ಭಾಗವನ್ನು ಸಹ ಮಾಹಿತಿಗಾಗಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

5. ಬೆಂಗಳೂರಿನ ಕಾವೇರಿ ಭವನದ ನಿಗಮದ ಆಡಳಿತ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿಗಳಿಗೆ ಮತ್ತು ತಿಳಿಸಿದ ಕಛೇರಿಗಳ ಸಿಬ್ಬಂದಿಗೆ ಮೇಲೆ ತಿಳಿಸಿದಂತೆ ಹಾಜರಾತಿಯನ್ನು ದಾಖಲಿಸುವ ವ್ಯವಸ್ಥೆಯಿಂದ ವಿನಾಯಿತಿಯನ್ನು ನೀಡಲಾಗಿರುತ್ತದೆ:

| | |
|---|---|
| 1. | ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)/(ತಾಂತ್ರಿಕ), ಕವಿಪ್ರನಿನಿ ಹಾಗೂ ಎಲ್ಲಾ ಮುಖ್ಯ ಇಂಜಿನಿಯರ್(ವಿ)/ ಆರ್ಥಿಕ ಸಲಹೆಗಾರರು, ಕವಿಪ್ರನಿನಿ. |
| 2. | ಕವಿಮಂ/ಕವಿಪ್ರನಿನಿ ಅಧಿಕಾರಿಗಳ/ನೌಕರರ ಸಂಘ ಸಂಸ್ಥೆಗಳ ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಗಳು. |
| 3. | ಇಂಧನ ಇಲಾಖೆಯ ಎಸ್ಕಾಂಗಳ ಮಾನಿಟರಿಂಗ್ ಸೆಲ್, ವಿಕಾಸ ಸೌಧ, ಕಛೇರಿಯ ಸಿಬ್ಬಂದಿ. |

ನಿಗಮದ ಕೆಲಸಗಳ ದೃಷ್ಟಿಯಿಂದ ಕಛೇರಿಗಳ/ಶಾಖೆಗಳ ಮುಖ್ಯಸ್ಥರು ಯಾವುದೇ ಅಧಿಕಾರಿ/ನೌಕರರನ್ನು ಕಛೇರಿ ಅವಧಿಯ ಹೊರತಾದ ಅವಧಿಯಲ್ಲಿ ಕರ್ತವ್ಯದ ಅವಶ್ಯಕತೆಗೆ ಅನುಗುಣವಾಗಿ ಹಾಜರಿದ್ದು ಕಾರ್ಯನಿರ್ವಹಿಸಲು ಸೂಚಿಸಿದ ಸಂದರ್ಭಗಳಲ್ಲಿ ಸಿಬ್ಬಂದಿಯು ಹಾಜರಿದ್ದು ಕಾರ್ಯ ನಿರ್ವಹಿಸತಕ್ಕದ್ದು.

ನಿಗಮದ ಸಿಬ್ಬಂದಿಯು ಮೇಲಿನ ಸೂಚನೆಗಳಂತೆ ಲಾಗ್‌ಸೇಫ್ ಮೂಲಕ ತಮ್ಮ ಹಾಜರಾತಿಯನ್ನು ದಾಖಲಿಸುವುದರ ಜೊತೆಗೆ, ಸಂಬಂಧಿಸಿದ ಕಾರ್ಯನಿರ್ವಹಿಸುವ ಕಛೇರಿಗಳಲ್ಲಿ/ಶಾಖೆಗಳಲ್ಲಿ/ಸ್ಥಳಗಳಲ್ಲಿ ಸಿಬ್ಬಂದಿಯು ಉಪಸ್ಥಿತರಿರುವುದನ್ನು ಸಂಬಂಧಿಸಿದ ನಿಯಂತ್ರಣ ಅಧಿಕಾರಿಗಳು ಖಚಿತಪಡಿಸಿ

ಕೊಳ್ಳತಕ್ಕದ್ದು. ಪ್ರಸ್ತುತ ನಿರ್ವಹಿಸುತ್ತಿರುವ ಹಾಜರಾತಿ ಪುಸ್ತಕವನ್ನು ನಿರ್ವಹಿಸುವುದನ್ನು ಮುಂದುವರೆಸತಕ್ಕದ್ದು.

ಲಾಗ್‌ಸೇಫ್ ಮೂಲಕ ಅಟೆಂಡೆನ್ಸ್ ಲಾಗ್ ರಿಪೋರ್ಟ್‌ಗಳನ್ನು ಪಡೆಯುವ ವಿಷಯಗಳಲ್ಲಿ/ಮತ್ತಿತರ ವಿಷಯಗಳಲ್ಲಿ ಸ್ಪಷ್ಟೀಕರಣಗಳ ಅವಶ್ಯಕತೆಯಿದ್ದಲ್ಲಿ, ಸಂಬಂಧಿಸಿದ ಕಛೇರಿಗಳ ಮುಖ್ಯಸ್ಥರು ಹಾಗೂ ಶಾಖಾ/ವಿಭಾಗ ಮುಖ್ಯಸ್ಥರು ಅಧೀಕ್ಷಕ ಇಂಜಿನಿಯರ್(ವಿ)(ಐಟಿ ಮತ್ತು ಎಂಐಎಸ್), ಕವಿಪ್ರನಿನಿ ರವರ ಕಛೇರಿಯನ್ನು ಸಂಪರ್ಕಿಸಲು ಸೂಚಿಸಿದೆ.

ವ್ಯವಸ್ಥಾಪಕ ನಿರ್ದೇಶಕರು ರವರಿಂದ
ಅನುಮೋದಿಸಲ್ಪಟ್ಟಿದೆ

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.,)**
**ಕವಿಪ್ರನಿನಿ.**

**<u>ಪ್ರತಿಗಳು</u>:**

1. ಎಲ್ಲಾ ಮುಖ್ಯ ಇಂಜಿನಿಯರ್(ವಿ)/ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
2. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/(ಪ್ರಸರಣ)/ (ಆ. ಮತ್ತು ಮಾ.ಸಂ)/ ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in → eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>**

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ,
4. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು,

**<u>ಪ್ರತಿಗಳು ಮಾಹಿತಿಗಾಗಿ:</u>**

1. ಶ್ರೀ.ಆರ್.ಹೆಚ್. ಲಕ್ಷ್ಮೀ ಪತಿ, ಅಧ್ಯಕ್ಷರು, ಕವಿಪ್ರನಿ.ನೌ.ಸಂಘ(ನೋ.ಸಂ.659) ಮತ್ತು ನಿರ್ದೇಶಕರು ಕವಿಪ್ರನಿನಿ & ವಿಸಕಂಗಳು.
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಮತ್ತು ನಿರ್ದೇಶಕರು, ಕವಿಪ್ರನಿನಿ & ವಿಸಕಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್.ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳು/ ಪ.ಜಾ/ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು.